ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತಮೂರನೆಯ ಅಧಿವೇಶನ

ಗುರುವಾರ, ದಿನಾಂಕ: 4ನೇ ಫೆಬ್ರುವರಿ, 2021

F.S.L.., ನಲ್ಲಿ ನಡೆದಿರುವ ನೇಮಕಾತಿ ಅಕ್ರಮದ ಕುರಿತು

ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು):-

379(432) ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪೊಲೀಸ್ ಇಲಾಖೆಯ ಎಫ್.ಎಸ್.ಎಲ್.,ನಲ್ಲಿ ಎಮ್.ಎಸ್.ಸಿ., ಕಂಪ್ಯೂಟರ್ ಸೈನ್ಸ್ ಅಥವಾ ಎಮ್.ಟೆಕ್., ವಿದ್ಯಾಬ್ಯಾಸದ ಅರ್ಹತೆ ಹೊಂದಿರಬೇಕಾದ ಫೋಟೋಗ್ರಾಫಿ ವಿಜ್ಞಾನ ಸಹಾಯಕರ

ಹುದ್ದೆಗೆ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮೋ ವಿದ್ಯಾಬ್ಯಾಸ ಹೊಂದಿರುವವರನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಎಮ್.ಎಸ್.ಸಿ., ಕಂಪ್ಯೂಟರ್ ಸೈನ್ಸ್‌ಗೆ ಸಿನಿಮಾಟೋಗ್ರ್ರಫಿಯಲ್ಲಿ ಡಿಪ್ಲೊಮೋ ಸರಿಸಮಾನ ಎಂಬ ವರದಿಯನ್ನು ನೀಡಿದವರು ಯಾರು; ಈ ರೀತಿಯಾಗಿ ವಿದ್ಯಾಬ್ಯಾಸದ ಅರ್ಹತೆಯನ್ನು ಕಡಿಮೆಗೊಳಿಸುವ ಅಧಿಕಾರ ಯಾರಿಗಿದೆ;

(ಆ) ಪೊಲೀಸ್ ಇಲಾಖೆಯ ಎಫ್.ಎಸ್.ಎಲ್.,ನಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮೋ ವಿದ್ಯಾಬ್ಯಾಸ ಹೊಂದಿದವರು ಓಓಡಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಡಿಸೆಂಬರ್ 2018 ರಲ್ಲಿ ಅರ್ಹ ವಿದ್ಯಾಬ್ಯಾಸ ಪೂರ್ಣಗೊಳ್ಳುವುದಾಗಿ ಸದನಕ್ಕೆ ಲಿಖಿತ ಮಾಹಿತಿ ನೀಡಲಾಗಿದೆಯೇ; ಈ ಸರ್ಕಾರಿ ನೌಕರರು ಉನ್ನತ ಶಿಕ್ಷಣ ಪಡೆಯಲು ಸರ್ಕಾರದ ಅನುಮತಿ ಕೋರಿ ಮನವಿ ಸಲ್ಲಿಸಿರುತ್ತಾರೆಯೇ; ಸಲ್ಲಿಸಿದ್ದಲ್ಲಿ, ಸದರಿ ಮನವಿಯ ಪ್ರತಿ ಹಾಗೂ ಕಛೇರಿಯಲ್ಲಿ ಸದರಿ ಮನವಿಗಳನ್ನು ಸ್ವೀಕರಿಸಿದ ದಿನಾಂಕದೊಂದಿಗೆ ಮಾಹಿತಿ ನೀಡುವುದು ;

(ಇ) ಪೊಲೀಸ್ ಇಲಾಖೆಯ ಎಫ್.ಎಸ್.ಎಲ್.,ನಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮೋ ವಿದ್ಯಾಬ್ಯಾಸ ಹೊಂದಿದವರು ಓಓಡಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರಿಗೆ ದೂರ ಶಿಕ್ಷಣದ ಉನ್ನತ ಶಿಕ್ಷಣ ಪಡೆಯಲು ಸರ್ಕಾರ ಅನುಮತಿ ನೀಡಿದಲ್ಲಿ, ಸದರಿ ಆದೇಶದ ಪ್ರತಿ ನೀಡುವುದು; ಸದರಿಯವರಿಗೆ ಯಾವ ದಿನಾಂಕದಂದು ಉನ್ನತ ಶಿಕ್ಷಣ ಪಡೆಯಲು ಅನುಮತಿಸಲಾಗಿದೆ; ಸರ್ಕಾರದ ಅನುಮತಿ ಇಲ್ಲದೆ ಉನ್ನತ ಶಿಕ್ಷಣ ಮತ್ತು ಇತರೆ ಲಾಭದಾಯಕ ಕೆಲಸಕಾರ್ಯಗಳನ್ನು ನಿರ್ವಹಿಸುವುದು ಸರ್ಕಾರಿ ನೌಕರರ ನಡತೆ ನಿಯಮಾವಳಿಗೆ ಅನುಗುಣವಾಗಿದೆಯೇ; ಈ ಕುರಿತು ಸರ್ಕಾರದ ನಿಲುವೇನು?